ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

**ಪ್ರಕಟಣೆಗಾಗಿ**

# ತನ್ನ ತಾನರಿಯುವುದೇ ಆನಂದ

– ಡಾ. ಕೆ. ಅನಂತರಾಮು

ತನ್ನ ತಾನರಿಯವುದೇ ಆನಂದ ಎಂದು ಮೈಸೂರಿನ ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 23 ರಂದು ಅಧ್ಯಯನ ಶಿಬಿರದಲ್ಲಿ 'ನಿಸ್ಸಂಗ ಯೋಗ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ತಿಳಿಸಿದರು.

ಸಾಧನೆ ಮಾಡಬೇಕಾದರೆ ಪೂರ್ವ ಜನ್ಮದ ಪುಣ್ಯ ಹಾಗೂ ಸದ್ಗುರುವಿನ ಸಂಘ ಅವಶ್ಯಕ. ಭವಬಂಧನಗಳಿಂದ ಮುಕ್ತರಾಗಿ ಲೌಕಿಕ ವಿಷಯಗಳಿಂದ ದೂರವಿರಬೇಕು. ವಿವೇಕ ಮಾರ್ಗದಿಂದ ಸದ್ಗುರುವಿನ ಕೃಪೆ ಪಡೆದು ನಾನಾರು ಎಂಬುದನ್ನು ಅರಿಯಬೇಕು. ನಾನ್ಯಾರೆಂಬುದು ಅಂಗೈ ಮೇಲಿರುವ ಮಾಣಿಕ್ಯದಂತೆ ನಮ್ಮಲ್ಲಿಯೇ ಇರುತ್ತದೆ. ವೈರಾಗ್ಯ ಸಾಧನೆಯಿಂದ ಆಧ್ಯಾತ್ಮಿಕ ಅರಿವನ್ನು ನಾವು ಪಡೆಯಬಹುದು. 'ಪುಣ್ಯದ ಫಲದಿಂದ ಸ್ವರ್ಗ', 'ಪಾಪದ ಫಲದಿಂದ ನರಕ' ಇವೆರಡರ ಸಮತೋಲನವೇ ಮನುಷ್ಯ ಜನ್ಮ. ನನಗೂ, ಜಗತ್ತಿಗೂ ಹಾಗೂ ಶರೀರಕ್ಕೂ ಏನೂ ಸಂಬಂಧವಿಲ್ಲ ಎಂದು ಮನಸ್ಸನ್ನು ಏಕಾಗ್ರತೆಗೊಳಿಸಿ ಪರಮಾತ್ಮನಲ್ಲಿ ಲೀನಗೊಳಿಸಬೇಕು. ಮೋಕ್ಷ ಪಡೆಯಲಿಚ್ಛಿಸುವವರು ಸಪ್ತ ಭೂಮಿಕೆಗಳನ್ನು ದಾಟಬೇಕು. 'ನಾನು' ಎಂಬುದು ಅನಾದಿಯ ಸರ್ವರೂಪ ಅದು ಯಾವ ಕಾಲಕ್ಕೂ ಬದಲಾಗುವುದಿಲ್ಲ ಎಂದು ತಿಳಿಸಿದರು.

ವಿಜಯಪುರ ಜಿಲ್ಲೆ ಅಥರ್ಗದ ಶ್ರೀ ಗುರುದೇವಾಶ್ರಮದ ಶ್ರೀ ಈಶಪ್ರಸಾದ ಸ್ವಾಮಿಗಳು 'ಚತುರ್ಭೂಮಿಕಾ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ಲೌಕಿಕ ಸುಖದಿಂದ ಬೇಸತ್ತು ಸಮಸ್ತ ದುಃಖದಿಂದ ತಾನು ಚಿರಶಾಂತಿಯನ್ನು ಪಡೆಯಲಿಚ್ಛಿಸುವವನೇ 'ಯೋಗಿ'. ಇವನು ಉಳಿದ ಪ್ರಾಪಂಚಿಕರಿಂದ ಭಿನ್ನ. ನಿರಂತರ ಶ್ರವಣ, ಮನನ ಹಾಗೂ ಧ್ಯಾನದ ಮೂಲಕ ಆಧ್ಯಾತ್ಮಿಕ ಮುಕ್ತಿಯನ್ನು ಸಾಧಿಸಬೇಕು. ಮನಸ್ಸಿನಲ್ಲಿ ಕಾಮ, ಕ್ರೋಧ, ಮದ, ಮತ್ಸರಗಳನ್ನು ತೆಗೆಯುವ ಮೂಲಕ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಹೊಂದಬೇಕು. ಇದು ಒಂದು ದಿನದ ಸಾಧನೆಯಲ್ಲ. ನಿರಂತರ ಅರಿವಿನಿಂದ ಮನಸ್ಸನ್ನು ಪರಮಾತ್ಮನಲ್ಲಿ ಧ್ಯಾನಾಸಕ್ತಗೊಳಿಸಿ ಸಾಧನೆ ಮಾಡಬೇಕು. ಸಾಧು–ಸಂತರ ದರ್ಶನದಿಂದ ವಿರಕ್ತಿ ಮನೋಭಾವ ಬೆಳೆಯುವುದು ಹಾಗೂ ಸತ್ಸಂಗ ಗೋಷ್ಠಿಗಳಿಂದ ಆತ್ಮಾನಂದ ಜ್ಯೋತಿ ಬೆಳಗುವುದು. ಗುರುಗಳ ಉಪದೇಶದ ಒಂದೊಂದು ಶಬ್ಧವನ್ನು ಏಕಾಗ್ರತೆಯಿಂದ ಶ್ರವಣ ಮಾಡಬೇಕು. ಯೋಗಿ ಇರುವ ಕಡೆ ಅಜ್ಞಾನ, ಆಲಸ್ಯ ಇರುವುದಿಲ್ಲ.

ಯೋಗಿಗೆ ಪರಮೇಶ್ವರನೇ ಶಾಶ್ವತ, ಪ್ರಪಂಚ ಎಂಬುದು ಭಾಸ ಮಾತ್ರ. ಅವನು ಎಲ್ಲಾ ಇಂದ್ರಿಯಗಳ ಸುಖವನ್ನು ಮರೆಯುವ ಮೂಲಕ ಮನಸ್ಸಿನ ತುಂಬಾ ಆತ್ಮಜ್ಞಾನ ತುಂಬಿ ಮೋಕ್ಷವನ್ನು ಪಡೆಯುತ್ತಾನೆ. ಎಲ್ಲಾ ಯಜ್ಞಗಳಿಗಿಂತ ಜಪ ಸ್ತೋತ್ರವೇ ಶ್ರೇಷ್ಠ. ಮನದಲ್ಲಿಯೇ ನಿರಂತರ ಜಪ ಮಾಡುತ್ತಿರಬೇಕು ಎಂದು ತಿಳಿಸಿದರು.

ಶಿಬಿರದಲ್ಲಿ ಕರ್ನಾಟಕ, ಕೇರಳ ಹಾಗೂ ಮಹಾರಾಷ್ಟ್ರದಿಂದ ಆಗಮಿಸಿರುವ 183 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ. ಬೆಳಗ್ಗೆ ಶಿಬಿರಾರ್ಥಿಗಳು ಯೋಗ ಮತ್ತು ಧ್ಯಾನದ ಅಭ್ಯಾಸ ಮಾಡಿದರು. ಮಧ್ಯಾಹ್ನ ಸುತ್ತೂರು ಶ್ರೀಮಠದ ಗುರು ಪರಂಪರೆ ಕುರಿತ ಅನಿಮೇಷನ್ ಚಿತ್ರವನ್ನು ವೀಕ್ಷಿಸಿದ ನಂತರ ಶ್ರೀ ಸುತ್ತೂರು ಕ್ಷೇತ್ರ ದರ್ಶನದಲ್ಲಿ ಮೂಲ ಕರ್ತೃಗದ್ದುಗೆ, ಮೂಲಮಠ, ಸೋಮೇಶ್ವರ ದೇವಸ್ಥಾನ, ಮಹದೇಶ್ವರರು ರಾಗಿ ಬೀಸಿದ ಕಲ್ಲು, ನಾರಾಯಣಸ್ವಾಮಿ ಹಾಗೂ ವೀರಭದ್ರೇಶ್ವರ ದೇವಸ್ಥಾನಗಳ ದರ್ಶನ ಪಡೆದು ಪುನೀತ ಭಾವ ಹೊಂದಿದರು. ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆಗಳ ಮಾಹಿತಿಯನ್ನು ಆಸಕ್ತಿಯಿಂದ ತಿಳಿದುಕೊಂಡರು.



**ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆಯುತ್ತಿರುವ ಅಧ್ಯಯನ ಶಿಬಿರದಲ್ಲಿ ಶ್ರೀ ನಿಜಗುಣ ಶಿವಯೋಗಿಗಳ 'ಪರಮಾರ್ಥಗೀತೆ' ಕೃತಿಯ ಕುರಿತು ಮೈಸೂರಿನ ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಉಪನ್ಯಾಸ ನೀಡುತ್ತಿರುವುದು.**